<u>ಅ.ದಾವಾ ನಂ. 161/17</u> ಪಿ.ಡಬ್ಲ್ಯೂ-1

<u>ದಿನಾಂಕ 13/09/2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.</u>

<u>ಮುಂದುವರಿದ ಪಾಟೀ ಸವಾಲುಃ</u> ಶ್ರೀ ಎಂ.ಈ.ಎಸ್. ವಕೀಲರಿಂದ

ನಾನು ಈ ಪ್ರಕರಣದಲ್ಲಿ ಸಲ್ಲಿಸಿರುವ ದಾಖಲಾತಿಗಳನ್ನೆಲ್ಲಾ ನೋಡಿ ತಿಳಿದುಕೊಂಡಿದ್ದೇನೆ. 'ಎ' ಷೆಡ್ಯೂಲ್ ಸ್ವತ್ತುಗಳು ನಮ್ಮ ತಂದೆಗೆ ಅವರ ತಂದೆಯಿಂದ ಎಂ.ಆರ್. 3/93-94 ರ ಪ್ರಕಾರ ಬಂದಿರುತ್ತದೆ ಎಂದರೆ ಸರಿ. ಸಾಕ್ಷಿಗೆ 'ಬಿ' ಷೆಡ್ಯೂಲ್ ಸ್ವತ್ತಿನ ಪಹಣಿಯನ್ನು ತೋರಿಸಿ ಅದರಲ್ಲಿ ಕಾಳೇಗೌಡ ಬಿನ್ ಮಾಟೀಗೌಡರಿಗೆ ಮಂಜೂರು ಪ್ರಕಾರ ಬಂದಿರುವುದಾಗಿ ನಮೂದಾಗಿರುತ್ತದೆ ಎಂದು ಸೂಚಿಸಲು ಸಾಕ್ಷಿ ತಪ್ಪು ಎಂದು ಹೇಳುತ್ತಾರೆ. ಸಾಕ್ಷಿಗೆ 'ಸಿ' ಷೆಡ್ಯೂಲ್ ಸ್ವತ್ತುಗಳ ಐಟಂ ನಂ. 1 ರಿಂದ 3 ನ್ನು ತೋರಿಸಿ ಅವುಗಳ ಕ್ರಯದ ಮೂಲಕ ಬಂದಿರುವುದಾಗಿ ಸೂಚಿಸಿದ್ದಕ್ಕೆ ಸಾಕ್ಷಿ ಹೌದು ಎಂದು ಒಪ್ಪುತ್ತಾರೆ. 'ಡಿ' ಅನುಸೂಚಿ ಸ್ವತ್ತು ಸಹ ನಮ್ಮ ತಂದೆಗೆ ಕ್ರಯದ ಮೂಲಕ ಬಂದಿರುತ್ತದೆ ಎಂದರೆ ಸರಿ. ಸರ್ವೆ ನಂ. 115/6 ನಿ.ಪಿ 11 ರಂತೆ ನನ್ನ ತಂದೆಗೆ ಮಂಜೂರಾಗಿ ಸಾಗುವಳಿ ಚೀಟಿ ನೀಡಿರುವಂತಹ ಆಸ್ತಿ ಎಂದರೆ ಸರಿಯಲ್ಲ.

2. ಸಾಕ್ಷಿಗೆ ನಿ.ಪಿ 12 ನ್ನು ತೋರಿಸಿ ನಮ್ಮ ತಾತನಿಗೆ ಬಂದಂತಹ ಆಸ್ತಿಗಳನ್ನು ನನ್ನ ತಂದೆ ಹಾಗೂ ನನ್ನ ಚಿಕ್ಕಪ್ಪ ಅಪ್ಪೇಗೌಡ ರವರು ವಿಭಾಗ ಮಾಡಿಕೊಂಡಿರುವುದಾಗಿ ಎಂ.ಆರ್. 3/93-94 ರಂತೆ ಆಗಿರುತ್ತದೆ ಎಂದರೆ ಸರಿ. 'ಸಿ' ಅನುಸೂಚಿ ಸ್ವತ್ತುಗಳು ಮ್ಯುಟೇಷನ್ ಪ್ರಕಾರ ಕ್ರಯ ಎಂದು ನಮೂದಾಗಿದೆ ಎಂದು ಸೂಚಿಸಲು ಸಾಕ್ಷಿ ಹೇಳುತ್ತಾರೆ ನಮೂದಾಗಿದ್ದರೂ ಅವೆಲ್ಲಾ ಒಟ್ಟು ಕುಟುಂಬದ ಆಸ್ತಿಗಳು ಎಂದು.

3. ದಾವಾ ಸ್ವತ್ತುಗಳಲ್ಲಿ ನಾವು ಸ್ವಾಧೀನದಲ್ಲಿ ಇದ್ದೇವೆ ಎಂದು ಮಹಜರ್ ಮಾಡಬೇಕೆಂದು ಯಾರಿಗೂ ಅರ್ಜಿ ನೀಡಿಲ್ಲ. ಪಹಣಿ ಪತ್ರಿಕೆಯಲ್ಲಿ ಸ್ವಾಧೀನದಾರರ ಕಾಲಂ ನಲ್ಲಿ ಯಾರು ಸ್ವಾಧೀನದಲ್ಲಿರುತ್ತಾರೋ ಅವರ ಹೆಸರು ನಮೂದಾಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ನಿ.ಪಿ 8 ಮತ್ತು 9 ನ್ನು ತೋರಿಸಿ ವ್ಯವಸಾಯಗಾರರ ಕಾಲಂ ನಲ್ಲಿ ನಿಮ್ಮ ತಂದೆಯ ಹೆಸರು ನಮೂದಾಗಿದೆ ಎಂದು ಸೂಚಿಸಲು ಸಾಕ್ಷಿ ಹೌದು ಎಂದು ಒಪ್ಪುತ್ತಾರೆ. ನಾನು ಈ ದಾವೆಯನ್ನು ಸಲ್ಲಿಸಿದ ನಂತರ ಗ್ರಾಮ ಲೆಕ್ಕಾಧಿಕಾರಿ, ರಾಜಸ್ವ ನಿರೀಕ್ಷಕರವರ ಬಳಿ ಹೋಗಿ ಯಾರೂ ಸ್ವಾಧೀನದಲ್ಲಿ ಇರುತ್ತಾರೆ ಎಂದು ವರದಿ ನೀಡಿ ಎಂದು ಕೇಳಿಕೊಂಡಿರುತ್ತೇನೆ. ಗ್ರಾಮ ಲೆಕ್ಕಾಧಿಕಾರಿಗಳ ಮತ್ತು ರಾಜಸ್ವ ನಿರೀಕ್ಷಕರು ಸ್ಥಳಕ್ಕೆ ಹೋಗಿ ಸ್ಥಳೀಯರ ಸಹಿಗಳನ್ನು ಪಡೆದುಕೊಂಡರೋ ಇಲ್ಲವೋ ನನಗೆ ಗೊತ್ತಿಲ್ಲ.

4. ನಾನು ಗ್ರಾಮ ಲೆಕ್ಕಾಧಿಕಾರಿಗಳ ಬಳಿ ನಾನು 2002-03 ರಿಂದ ಸ್ವಾಧೀನದಲ್ಲಿ ಇರುವುದಾಗಿ ಹೇಳಿಕೊಂಡಿರುತ್ತೇನೆ. ದಾಖಲಾತಿ ಯಾವುದು ನೀಡಿಲ್ಲ. ಸ್ವಾಧೀನದಲ್ಲಿ ನೀವೇ ಇದ್ದಿದ್ದರೇ ಪಹಣಿಗಳಲ್ಲಿ ನಿಮ್ಮ ಹೆಸರು ನಮೂದಾಗಿತ್ತು ಅಲ್ಲವೇ ಎಂದು ಸೂಚಿಸಿದ್ದಕ್ಕೆ ಸಾಕ್ಷಿ ಹೇಳುತ್ತಾರೆ ಆ ರೀತಿ ಎಲ್ಲಾ ನಾವು ಹೇಳಿ ಮಾಡಿಸುವುದಕ್ಕೆ ಆಗುವುದಿಲ್ಲ ಎಂದು. ನಿ.ಪಿ 16 ರಿಂದ 19 ನ್ನು ದಾವೆ ಸಲ್ಲಿಸಿದ ನಂತರ ಕಂದಾಯ ಅಧಿಕಾರಿಗಳ ಜೊತೆ ಶಾಮೀಲಾಗಿ ನನ್ನ ಅನುಕೂಲಕ್ಕೆ ಸೃಷ್ಟಿಸಿಕೊಂಡಂತಹ ದಾಖಲೆಗಳಾಗಿರುತ್ತವೆ ಎಂದರೆ ಸರಿಯಲ್ಲ.

5. ಪ್ರತಿವಾದಿಗಳ ಹೆಸರಲ್ಲಿ ಇರುವ ಖಾತೆಯನ್ನು ನೀವು ಯಾವುದೇ ಮೇಲ್ಮನವಿಯಲ್ಲಿ ಪ್ರಶ್ನಿಸಿರುವುದಿಲ್ಲ ಎಂದು ಸೂಚಿಸಲು ಸಾಕ್ಷಿ ಹೇಳುತ್ತಾರೆ ನ್ಯಾಯಾಲಯದಲ್ಲಿ ಇರುವ ಕಾರಣ ಪ್ರಶ್ನಿಸಿಲ್ಲ ಎಂದು. ಮೊದಲನೇ ಪ್ರತಿವಾದಿ 2 ಮತ್ತು 3 ನೇ ಪ್ರತಿವಾದಿಗೆ ದಾನಪತ್ರ ಮಾಡಿದ್ದು ಅದರಂತೆ ಅವರು ಸ್ವಾಧೀನದಲ್ಲಿ ಇದ್ದು, 'ಎ' ಷೆಡ್ಯೂಲ್ ಆಸ್ತಿಗಳನ್ನು ಹೊರುತುಪಡಿಸಿ ಬಾಕಿ ಎಲ್ಲವೂ ನಮ್ಮ ತಂದೆಯ ಸ್ವಯಾರ್ಜಿತ ಆಸ್ತಿಗಳಾಗಿದ್ದು ನಮಗೆ ಅದರಲ್ಲಿ ಭಾಗ ಇರುವುದಿಲ್ಲ ಎಂದರೆ ಸರಿಯಲ್ಲ. 'ಎ' ಷೆಡ್ಯೂಲ್ ಆಸ್ತಿಗಳನ್ನು ಹೊರುತುಪಡಿಸಿ ಬೇರೆಲ್ಲಾ ಆಸ್ತಿಗಳನ್ನು ನಮ್ಮ ತಂದೆ ತನ್ನ ಸ್ವಂತ ಆದಾಯದಿಂದ ಗಳಿಸಿದಂತಹ ಆಸ್ತಿಗಳಾಗಿದ್ದು, ಅವುಗಳಲ್ಲಿ ನಮಗೆ ಭಾಗವಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ನಮಗೆ ಹಕ್ಕಿಲ್ಲವೆಂದು ಗೊತ್ತಿದ್ದರೂ ನನ್ನ ತಂದೆಗೆ ತೊಂದರೆ ನೀಡುವ ದುರುದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ**

ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.

ಓ.ಹೇ.ಕೇ.ಸ.ಇ.

ಜೆಎಂಎಫ್‌ಸಿ., ಹೊಳೆನರಸೀಪುರ.